**<u>ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ</u>**

**<u>ಸಿ.ಸಿ. ನಂ.1100/2015</u>**

| | | |
|---|---|---|
| ಹೆಸರು | ಪುಟ್ಟ ಓಬಳರೆಡ್ಡಿ | ಪ್ರಾ.ಸಾ.7 |
| ತಂದೆ ಹೆಸರು | ಓಬಯ್ಯ | ಚಾ.ಸಾ.21 |
| ವಯಸ್ಸು | 45 ವರ್ಷ | |
| ಕೆಲಸ | ಪಿಐ | ಸಾ.ಪ್ರ.ವ.ಬೋ |
| ಹಾಲಿ ವಾಸ | ಬ್ಯಾಡರಹಳ್ಳಿ | ದಿ:–07.11.2023 |

**<u>ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :–</u>**

ನಾನು 2014 ರಿಂದ 2016 ವರೆಗೆ ನಂದಗುಡಿ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕನಾಗಿ ಕಾರ್ಯ ನಿರ್ವಹಿಸಿರುತ್ತೇನೆ.

ದಿ:30.03.2015 ರಂದು ಚಾಸಾ.19 ರವರಿಂದ ಪ್ರಕರಣದ ಕಡತ ಪಡೆದು ತನಿಕೆಯನ್ನು ಮುಂದುವರೆಸಿರುತ್ತೇನೆ. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಸಾಕ್ಷಿ ದಾರರ ಸಮಕ್ಷಮ ಚಾ.ಸಾ.1 ರವರು  ತೋರಿಸಿದ ಸ್ಥಳ ಪಂಚನಾಮೆ ಹಾಗೂ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ಸ್ಥಳ ಪಂಚನಾಮೆ ಸಮಯದಲ್ಲಿ ಅಪಘಾತಗೊಳಗಾದ ವಾಹನ ಸಂಖ್ಯೆ:ಕೆ.ಎ.01.ಎ.ಬಿ.8152 ಆಟೋ, ಕೆ.ಎ.01ಎಂ.ಬಿ.6910 ಕಾರನ್ನು ಮತ್ತು ಸಿ.ಟಿ.ಎ.1910 ಇನ್ನೊಂದು ಕಾರನ್ನು ಅಮಾನತ್ತುಪಡಿಸಿಕೊಂಡು, ಠಾಣಾ ಮಾಲು ಪಟ್ಟಿಗೆ ಅಳವಡಿಸಿರುತ್ತೇನೆ. ಸದರಿ ವಾಹನಗಳ ತಪಾಸಣೆಗೆ ಮನವಿಯನ್ನು ಸಲ್ಲಿಸಿರುತ್ತೇನೆ. ಸಿ:01.04.2015 ರಂದು ಮೃತರ ಶವ ಪರಿಕ್ಷಾ ವರದಿಯನ್ನು ಪಡೆದಿರುತ್ತೇನೆ. ದಿ:07.04.2015 ರಂದು ಅಪಘಾತ ಪಡಿಸಿದ ಕೆ.ಎ.01.ಎಂ.ಬಿ.6910 ಕಾರಿನ ಮಾಲೀಕರಾದ ಚಾ.ಸಾ.14 ರವರಿಗೆ ನೋಟಿಸ್ ನೀಡಿ ಉತ್ತರ ಪಡೆದು, ಇಂಡಿಮಿನಿಟಿ ಬಾಂಡ್‌ಪಡೆದು ಅವರಿಗೆ ವಾಹನ ಬಿಡುಗಡೆ ಮಾಡಿರುತ್ತೇನೆ. ಠಾಣೆಗೆ ಹಾಜರಾದ ಆರೋಪಿಯ ವಿರುದ್ದ ದಸ್ತಗಿರಿ ಕ್ರಮ ಜರುಗಿಸಿ, ಠಾಣಾ ಬಾಂಡ್ ಪಡೆದು ಬಿಡುಗಡೆ ಮಾಡಿರುತ್ತೇನೆ. ಅಪಘಾತಕೊಳ್ಳಾಗಾದ ವಾಹನ ಸಿ.ಟಿ.ಎ.1910 ಮಾಲೀಕರಿಗೆ ನೋಟಿಸ್ ನೀಡಿ ಉತ್ತರ ಪಡೆದು, ಇಂಡಿಮಿನಿಟಿ ಬಾಂಡ್‌ಪಡೆದು ಅವರಿಗೆ ವಾಹನ ಬಿಡುಗಡೆ ಮಾಡಿರುತ್ತೇನೆ. ದಿ:23.06.2015 ರಂದು ಸದರಿ ವಾಹನಗಳ ಐ.ಎಂ.ವಿ ವರದಿಯನ್ನು ಪಡೆದಿರುತ್ತೇನೆ. ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ವಿರುದ್ದ ಸಾಕ್ಷ್ಯಾದಾರಗಳು ಕಂಡು ಬಂದ ಕಾರಣ ಆರೋಪಿಯ ವಿರುದ್ದ ದೋಷಾಪರಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿ ನಿ.ಪಿ.2 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರ್ತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿ.ಪಿ.2(ಸಿ) ಎಂದು, ಸಾಕ್ಷಿ ಕಚ್ಚಾ ನಕ್ಷೆಯ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರ್ತಿಸಿದ್ದರಿಂದ ನಕ್ಷೆಯನ್ನು ನಿ.ಪಿ.9 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.9(ಎ) ಎಂದು ಗುರ್ತಿಸಲಾಯಿತು. ಸಾಕ್ಷಿ ನಿ.ಪಿ.5 ಮತ್ತು 6 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರ್ತಿಸಿದ್ದರಿಂದ ಸಾಕ್ಷಿಯ ಸಹಿಗಳನ್ನು ನಿ.ಪಿ.5(ಎ) ಮತ್ತು 6(ಎ) ಎಂದು ಗುರ್ತಿಸಲಾಯಿತು. ಸಾಕ್ಷಿ ನಿ.ಪಿ.8 ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರ್ತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿ.ಪಿ.8(ಬಿ) ಎಂದು ಗುರ್ತಿಸಲಾಯಿತು. ಸಾಕ್ಷಿ ಐ.ಎಂ.ವಿ ನೋಟಿಸ್‌ಗಳ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರ್ತಿಸಿದ್ದರಿಂದ ನಿ.ಪಿ.10 ರಿಂದ 13 ಗಳೆಂದು ಸಾಕ್ಷಿಯ ಸಹಿಗಳನ್ನು ನಿ.ಪಿ.10(ಎ) ರಿಂದ 13(ಎ) ಎಂದು ಗುರ್ತಿಸಲಾಯಿತು. ಸಾಕ್ಷಿ ವಾಹನದ ಮಾಲೀಕರ ಹೇಳಿಕೆ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರ್ತಿಸಿದ್ದರಿಂದ ಹೇಳಿಕೆಗಳನ್ನು ನಿ.ಪಿ.14 ರಿಂದ ನಿ.ಪಿ.17 ಎಂದು ಸಾಕ್ಷಿಯ ಸಹಿಗಳನ್ನು ನಿ.ಪಿ.14(ಎ) ರಿಂದ ನಿ.ಪಿ.15(ಎ) ಎಂದು ಗುರ್ತಿಸಲಾಯಿತು. ಸಾಕ್ಷಿ ಇಂಡಿಮಿನಿಟಿ ಬಾಂಡ್‌ಗಳ ಮೇಲಿರುವ ತಮ್ಮ ಸಹಿಗಳನ್ನು ನೋಡಿ ಗುರ್ತಿಸಿದ್ದರಿಂದ, ಬಾಂಡ್‌ಗಳನ್ನು ನಿ.ಪಿ.18 ರಿಂದ 20 ಎಂದು ಸಾಕ್ಷಿಯ ಸಹಿಗಳನ್ನು ನಿ.ಪಿ.18(ಎ) ರಿಂದ 20(ಎ) ಎಂದು ಗುರ್ತಿಸಲಾಯಿತು. ಸಾಕ್ಷಿ ನಿ.ಪಿ.7 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರ್ತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರ್ತಿಸಲಾಯಿತು. ಸಾಕ್ಷಿ ನಿ.ಪಿ.6 ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರ್ತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿ.ಪಿ.6(ಎ) ಎಂದು ಗುರ್ತಿಸಲಾಯಿತು. ಸಾಕ್ಷಿ 3 ಛಾಯಾ ಚಿತ್ರಗಳನ್ನು ನೋಡಿ ಗುರ್ತಿಸಿದ್ದರಿಂದ ಅವುಗಳನ್ನು ನಿ.ಪಿ.21 ರಿಂದ 23 ಎಂದು ಗುರ್ತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.24 ಎಂದು ಗುರ್ತಿಸಲಾಯಿತು.

**<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದ:</u>**

ಮಹಜರು ಕ್ರಮ ನಡೆಸಲು ಸಾಕ್ಷಿಗಳಿಗೆ ನೋಟಿಸ್ ನೀಡಿರಲಿಲ್ಲ. ಸದರಿ ಸಾಕ್ಷಿಗಳು ಸ್ಥಳದಲ್ಲಿದ್ದವರು ಆಗಿದ್ದು, ಅವರಿಗೆ ಮಹಜರು ಬಗ್ಗೆ ಮೌಖಿಕವಾಗಿ ಹೇಳಿರುತ್ತೇನೆ. ಸದರಿ ಮೌಖಿಕವಾಗಿ ಹೇಳಿದ ಬಗ್ಗೆ ನಿ.ಪಿ.2 ರಲ್ಲಿ ಬರೆದಿರುವ ಬಗ್ಗೆ ನೆನಪಿಲ್ಲ. ನಿ.ಪಿ.2 ಕ್ಕೆ ಸಹಿ ಮಾಡಿದ ಸಾಕ್ಷಿಗಳು ಮುಸ್ಲಿಂ ಸಮುದಾಯಕ್ಕೆ ಸೇರಿದವರಾಗಿದ್ದು, ಅವರಿಗೆ ಕನ್ನಡ ಓದಲು ಬರೆಯಲು ಬರುವ ಬಗ್ಗೆ ಕೇಳಿರಬಹುದು. ನಿ.ಪಿ.2 ರ ವಿಷಯಗಳನ್ನು ಓದಿ ತಿಳಿಸಿರುತ್ತೇನೆ. ನಿ.ಪಿ.2 ಅನ್ನು ನಮ್ಮ ತನಿಖಾ ಸಹಾಯಕ ರಾಮಾಂಜಿನಿ ಬರೆದಿರುತ್ತಾರೆ. ಸದರಿ ಓದಿ ಹೇಳಿದ ಬಗ್ಗೆ ಮತ್ತು ಬರೆದವರ ಬಗ್ಗೆ ನಿ.ಪಿ.2 ರಲ್ಲಿ ಉಲ್ಲೇಖಿಸಲು ತೊಂದರೆ ಇರಲಿಲ್ಲ. ಒಟ್ಟು 4 ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸದರಿ 4 ವಾಹನಗಳ ಪೈಕಿ ಮೋಟಾರ್ ಸೈಕಲ್‌ನ ಸಂಖ್ಯೆ

ನೆನಪಿಲ್ಲ. ನಿ.ಪಿ.9 ಅನ್ನು ಸ್ಥಳ ಮಹಜರು ಸಮಯದಲ್ಲಿಯೇ ತಯಾರಿಸಿರುತ್ತೇನೆ. ನಿ.ಪಿ.9 ರಲ್ಲಿ ದಿನಾಂಕ ಹಾಗೂ ನನ್ನ ಸಹಿ ಕೆಳಗೆ ಸಹ ದಿನಾಂಕ ನಮೂದಿಸಿಲ್ಲ ಎಂದರೆ ಸರಿ. ನಿ.ಪಿ.9 ಅನ್ನು ಚಾ.ಸಾ.1 ರವರ ಹೇಳಿಕೆ ಮೇಲೆ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.9 ಅನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ತಯಾರಿಸುವ ಅವಶ್ಯಕತೆ ಇರದ ಕಾರಣ ನಾನೇ ತಯಾರಿಸಿರುತ್ತೇನೆ. ಐ.ಎಂ.ವಿ ವರದಿ ಪಡೆಯಲು ನೀಡಿದ ವರದಿ ಪತ್ರವನ್ನು ಹಾಜರುಪಡಿಸಿರುತ್ತೇನೆ. ದೋಷಾರೋಪಣೆ ಪಟ್ಟಿಯ ಜೊತೆ ಸದರಿ ಮನವಿ ಪತ್ರವನ್ನು ಹಾಜರುಪಡಿಸಿದ ಬಗ್ಗೆ ನನಗೆ ನೆನಪಿಲ್ಲ. ನಿ.ಪಿ.5 ಮತ್ತು 6ಗಳನ್ನು ಪಡೆಯಲು ಯಾವುದೇ ಮನವಿ ಪತ್ರವನ್ನು ನೀಡಿರುವುದಿಲ್ಲ. ಅವುಗಳನ್ನು ಠಾಣೆಗೆ ನೇರವಾಗಿ ಸಲ್ಲಿಸಿರುತ್ತಾರೆ. ನಿ.ಪಿ.7, 18 ರಿಂದ 20 ಗಳನ್ನು ವಾಹನಗಳ ಮಾಲೀಕರೇ ತಯಾರಿಸಿಕೊಂಡು ನಿಯಾಮಾನುಸಾರ ಸಲ್ಲಿಸಿರುತ್ತಾರೆ. ವಾಹನದ ಮಾಲೀಕರ ಹೇಳಿಕೆಗಳ ಪಡೆದ ದಿನಾಂಕ ನನಗೆ ನೆನಪಿಲ್ಲ. ನಿ.ಪಿ.6 ರ ಪ್ರಕಾರ ಹೇಳಿಕೆಯನ್ನು ಪಡೆಯುವ ಮೊದಲು ನೋಟಿಸ್ ನೀಡಿರಲಿಲ್ಲ. ಸದರಿ ಆಟೋ ಚಾಲಕರ ವಿರುದ್ಧ ಯಾವುದೇ ಪ್ರಕರಣ ದಾಖಲಿಸಿರುವುದಿಲ್ಲ. ಆಟೋ ಚಾಲಕರ ವಿರುದ್ಧ ಪ್ರಕರಣ ದಾಖಲು ಮಾಡಲು ತೊಂದರೆ ಇರಲಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಆಟೋದಲ್ಲಿದ್ದ ವ್ಯಕ್ತಿಗಳು ಗಾಯಾಳುಗಳಾಗಿದ್ದ ಕಾರಣ, ಅವರಿಗೆ ಅಪಘಾತ ಪಡಿಸಿದ ವಾಹನದ ಬಗ್ಗೆ ತನಿಖೆ ಕೈಗೊಂಡ ಕಾರಣ, ಆಟೋ ಚಾಲಕನ ವಿರುದ್ಧ ಯಾವುದೇ ಪ್ರಕರಣ ದಾಖಲಿಸಿಲ್ಲ. ಸದರಿ ಆಟೋ ಚಾಲಕ ಪರವಾನಿಗೆ ಇಲ್ಲದೇ ಆಟೋ ಚಲಾಯಿಸುತ್ತಿದ್ದು ಅವರ ತಪ್ಪಿನಿಂದ ಅಪಘಾತವಾಗಿರುತ್ತದೆ ಹೊರತು, ಆರೋಪಿಯ ತಪ್ಪಿನಿಂದಲ್ಲ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದಲೇ ಅಪಘಾತವಾಗಿರುತ್ತದೆ ಎಂದು, ನಾನು ಖುದ್ದಾಗಿ ನೋಡಿರುವುದಿಲ್ಲ, ಆದರೆ ನಾನು ಕೈಗೊಂಡ ತನಿಖೆಯ ಆಧಾರದ ಮೇಲೆ ಆರೋಪಿಯ ತಪ್ಪು ಕಂಡು ಬಂದಿರುತ್ತದೆ. ಪ್ರಕರಣದಲ್ಲಿರುವ 4 ವಾಹನಗಳ ಪೈಕಿ ಆರೋಪಿಯ ವಾಹನಕ್ಕೆ ಮಾತ್ರ ವಿಮೆ ಇದ್ದ ಕಾರಣ ಅವರನ್ನು ಮಾತ್ರ ಆರೋಪಿಯನ್ನಾಗಿ ಮಾಡಿ, ಉಳಿದ ವಾಹನ ಚಾಲಕರನ್ನು ಹಾಗೆ ಬಿಟ್ಟಿರುತ್ತದೆ ಎಂದರೆ ಸರಿಯಲ್ಲ. ನಿ.ಪಿ.2 ಅನ್ನು ಠಾಣೆಯಲ್ಲಿ ಕುಳಿತು ತಯಾರಿಸಿ, ಚಾ.ಸಾ.1 ರವರಿಗೆ ಪರಿಹಾರ ಪಡೆಯಲು ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ತನಿಖೆಯನ್ನು ಕೈಗೊಂಡು, ಸುಳ್ಳು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಹೊಸಕೋಟೆ.**